


ಕೆಫೆಯೊಂದರಲ್ಲಿ ಜೋಕಿಮ್. ಯಾರ್ನಿ ಜೊತೆ ಲೇಖಕ



ಹಿಮ ಮರುಭೂಮಿ– ನಮ್ಮ ಪುಟ್ಟ ಡೇರೆ ಮೇಲೆ ರಾಕ್ಷಸ ಮೋಡಗಳ ಆಕ್ರಮಣ

# ಐಸ್‌ಲ್ಯಾಂಡ್ ಸುತ್ತು



ಹಿಮಪರ್ವತ, ಹಿಮ ಮರುಭೂಮಿ ನಡುವೆ ಸೈಕಲ್ ಸವಾರ ನನ್ನ ಗೆಳೆಯ ಜೋಕಿಮ್

ಕೊಡುತ್ತ, ಪ್ರಯಾಸದಿಂದ ಮುಂದುವರೆದೆವು.

ವಿಸ್ಮಯವೆಂದರೆ, ನೋಡ ನೋಡುತ್ತಾ, ಈ ವಾತಾವರಣದ ಖಿನ್ನತೆ, ಮ್ಲಾನತೆ, ಮಬ್ಬಿನ ಶಾಪ ಮಾಯವಾಗಿ ಚೇತೋಹಾರಿ ಬೆಳಕಿನ ವರದಿಂದ ಎಲ್ಲವೂ ಪುನಃ ಕಂಗೊಳಿಸಲು ಪ್ರಾರಂಭವಾದವು. ದಾರಿಯ ಒಂದು ಬದಿ ನಲಿವ ಅಟ್ಲಾಂಟಿಕ್ ಸಾಗರ, ಅದರ ಪಕ್ಕದಲ್ಲೇ ಕಡಿದಾದ ರೋಡುಗಲ್ಲಿನ ಸಾಲುಗಳು, ಜೀವ ತುಂಬಿದ ಗಿಡ. ಮರಗಳು, ಇನ್ನೊಂದು ಬದಿಯಲ್ಲಿ ಪ್ರಾಚೀನ ಘನರೂಪದ ಶಿಲಾರಸಗಳ ವಿಶಾಲ ಮೈದಾನಗಳು, ಮೈತುಂಬಿ ನಿಂತ ಸರೋವರಗಳು, ಹೂಗಳಿಂದ ತುಂಬಿ ಮೆರೆಯುತ್ತಿದ್ದ ಅಗಣಿತ ಹುಲ್ಲುಗಾವಲುಗಳು– ದೇಹದ ತುಂಬ, ಮನಸ್ಸಿನ ತುಂಬಾ ಎಂಥ ಪ್ರಫುಲ್ಲತೆ!

ಹತ್ತು ದಿನಗಳ ತನಕ ಮುಂದುವರಿದ, ಸುಖ ದುಃಖಗಳ ಈ ಪ್ರಯಾಣ ನಿಜಕ್ಕೂ ನಮ್ಮೆಲ್ಲ ಅನುಭವ, ಶಕ್ತಿ ಯುಕ್ತಿಗಳಿಗೆ ಸವಾಲಾದರೂ, ನಿಲ್ಲದೆ ಮುಂದುವರಿದು ಹನ್ನೊಂದನೇ ದಿನ ಸಮುದ್ರ ಬದಿಯ ಹೋಫೆನ್ (HOFN) ಎಂಬ ಸಣ್ಣ ಹಳ್ಳಿಯಲ್ಲಿ ರಾತ್ರಿಯ ಡೇರೆ ಹಾಕಿದೆವು. ಮುಂದಿನ ಎರಡು ದಿನಗಳಲ್ಲಿ ಹವಾಮಾನ ಮತ್ತೆ ವಿಪರೀತವಾಯಿತು. ಹವಾಮಾನ ಮುನ್ಸೂಚನೆ ಪ್ರಕಾರ, ಮುಂದಿನ ಕೆಲವು ದಿನಗಳವರೆಗೆ, ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಬಹುದೆಂಬ ವರದಿ ಬಂತು. ಅದೇ ದಾರಿಯಲ್ಲಿ ಮುಂದುವರೆಯುವ ನಮ್ಮ ಯೋಚನೆ ಕೈಬಿಟ್ಟು, ಉತ್ತಮ ವಾತಾವರಣವಿರುವ, ಸೈಕಲ್ ಸವಾರಿಗೆ ಅನುಕೂಲವಿರುವ, ಹತ್ತಿರದ ಸೆಲ್‌ಫೋಸ್ (Selfoss) ನಗರದತ್ತ ತಿರುಗಿದೆವು. ಸೈಕಲ್ ಸಮೇತ ಬಸ್ಸು ಹತ್ತಿ, 110 ಯುರೋ ಕೊಟ್ಟು, ಐದು ಗಂಟೆಗಳ ಪಯಣದ ಬಳಿಕ ಅಲ್ಲಿಗೆ ಮುಟ್ಟಿದೆವು.

ಸೆಲ್‌ಫೋಸ್ ಸಣ್ಣ, ಸುಂದರ, ಸ್ವಚ್ಛ ಊರು. ಜನಸಂಖ್ಯೆ ಕೇವಲ 6500, ನಮ್ಮ ಅದೃಷ್ಟಕ್ಕೆ ಅಲ್ಲಿಯ ಪ್ರಶಾಂತ ದೇವದಾರು ಅರಣ್ಯದಲ್ಲಿ, ನದಿಯ